ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರ:1603/2018

ಚಾಸಾ:7 ಪ್ರಾಸಾ:7

ದಿನಾಂಕ: 30.09.2023

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಸನಾವುಲ್ಲಾ ಅರಮಾನ್ |
| ತಂದೆಯ ಹೆಸರು | : | ಮೊಹಿದ್ದೀನ್ ಅರಮಾನ್ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪಕ್ಷಿ ಸಾಕಣೆ |
| ವಾಸ ಸ್ಥಳ | : | ಭಟ್ಕಳ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಸಾಕ್ಷಿಗೆ ದಿ: 25-12-2017 ರ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದ್ರಿ ದಾಖಲೆಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಸುಮಾರು 7-8 ವರ್ಷಗಳ ಹಿಂದೆ ಭಟ್ಕಳದ ಕಾರ್ ಗೆದ್ದೆಯಲ್ಲಿ ಸಹಿ ಮಾಡಿರುತ್ತೇನೆ. ನಾನು ಬೆಳಿಗ್ಗೆ ಹೋಗುತ್ತಿದ್ದಾಗ ಸದ್ರಿ ಸ್ಥಳದಲ್ಲಿ ಸುಮಾರು ಜನರು ಸೇರಿದ್ದು ನಾನು ಏನಾಗಿದೆ ಎಂದು ನೋಡಲು ಹೋದಾಗ ಪೊಲೀಸರು ಹಾಜರು ಇದ್ದು, ಕಳುವು ಆಗಿರುವ ವಿಚಾರ ಗೊತ್ತಾಗಿರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಏನೂ ಗೊತ್ತಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ದಿ: 25-12-2017 ರಂದು ಚಾಸಾ-10 ರವರು ನನ್ನನ್ನು ಪಂಚರಾಗಿ ಪೊಲೀಸ್ ಠಾಣೆಗೆ ಕರೆದಿರುತ್ತಾರೆ ಎಂದರೆ ಸರಿಯಲ್ಲ. ದಸ್ತಗಿರಿ ಮಾಡಲಾಗಿದ್ದ 1 ನೇ ಆರೋಪಿಯನ್ನು

ತೋರಿಸಿದ್ದರು ಎಂದರೆ ಸರಿಯಲ್ಲ. ಚಾಸಾ-8 ರವರು ಭಟ್ಕಳದ ಶಿರಾಲಿ ಚೆಕ್ ಪೋಸ್ಟ್ ನಲ್ಲಿ ವಾಹನದ ತಪಾಸಣೆ ಮಾಡುತ್ತಿದ್ದಾಗ ಹೊನ್ನಾವರ ಕಡೆಯಿಂದ ಭಟ್ಕಳ ಕಡೆಗೆ ಬರುತ್ತಿದ್ದ ಮಾರುತಿ ಸ್ವಿಫ್ಟ್ ಕಾರನ್ನು ನಿಲ್ಲಿಸಿದಾಗ 1 ನೇ ಆರೋಪಿಯನ್ನು ವಶಕ್ಕೆಪಡೆದಿರುವ ಬಗ್ಗೆ ಚಾಸಾ-10 ರವರು ನನ್ನ ಬಳಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ವಾಹವನ್ನು ಪರಿಶೀಲನೆ ಮಾಡಿದಾಗ ಯಾವುದೇ ದಾಖಲೆ ಇರಲಿಲ್ಲ ಅದು ಕಳುವು ಮಾಡಿದ ವಾಹನವೆಂದು ಚಾಸಾ-10 ರವರು ನನ್ನ ಮುಂದೆ ಹಾಜರುಪಡಿಸಿರುತ್ತಾರೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ.

1 ನೇ ಆರೋಪಿಯ ಸ್ವಖುಷಿ ಹೇಳಿಕೆ ಪಡೆದುಕೊಂಡಿದ್ದು, ಆತ ಉಳಿದ ಆರೋಪಿಗಳ ಹೆಸರನ್ನು ತಿಳಿಸಿರುತ್ತಾರೆ, ಸುಮಾರು 5-6 ಕಡೆ ಕಳ್ಳತನ ಮಾಡಿರುವುದಾಗಿ ತಿಳಿಸಿರುತ್ತಾರೆ ಎಂದು ನನಗೆ ಹೇಳಿದ್ದಾರೆ ಎಂದರೆ ಸರಿಯಲ್ಲ. ಕೆಎ-51-ಎನ್-1122 ಮಾರುತಿ ಸ್ವಿಫ್ಟ್ ಕಾರು, ಮಂಕಿ ಕ್ಯಾಪ್ ಮತ್ತು ಬಿಳಿ ಬಣ್ಣದ ಪ್ಲಾಸ್ಟರ್ ಟೇಪ್ ಹಾಗೂ ಒಂದು ಸ್ಟೀಲ್ ಚಾಕುವನ್ನು ನನ್ನ ಸಮಕ್ಷಮ ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಪೊಲೀಸ್ ಠಾಣೆಯ ಆವರಣದಲ್ಲಿದ್ದ ಮಾರುತಿ ಸ್ವಿಫ್ಟ್ ಕಾರನ್ನು ತೋರಿಸಿ ಇದೇ ಕಾರನ್ನು ಕಳ್ಳತನ ಮಾಡುವ ಸಮಯದಲ್ಲಿ ಉಪಯೋಗಿಸಿದ್ದು, ಕಾರನ್ನು ಸಹ ಕಳ್ಳತನ ಮಾಡಿಕೊಂಡು ಬಂದಿರುವುದಾಗಿ, ಅದರ ನಂಬರ್ ಪ್ಲೇಟ್ ತೆಗೆದು ಡುಪ್ಲಿಕೇಟ್ ನಂಬರ್ ಪ್ಲೇಟ್ ಹಾಕಿರುವುದಾಗಿ ಎಂದು ತನ್ನ ಸ್ವ ಖುಷಿ ಹೇಳಿಕೆಯಲ್ಲಿ ಹೇಳಿರುವುದಾಗಿ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಪೋಲಿಸ್ ಠಾಣಾ ಆವರಣದಲ್ಲಿ ಪೊಲೀಸರು 2 ರಿಂದ 3-30 ರವರೆಗೆ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**